

## ಶಾಂತಿ ಭ್ರಾಂತಿ

ಅ. 17ರ ಸಂಚಿಕೆಯ ಮುಖಪುಟ ಲೇಖನ 'ಶಾಂತಿ ಭ್ರಾಂತಿ' (ಲೇಖಕರು: ಶಿವಾನಂದ ಹಿರೇಮಠ) ಮನೋರೋಗದ ಕುರಿತು ವಿಸ್ತೃತ ಮಾಹಿತಿ ನೀಡಿತು. ನಾವು ಸಾಮಾನ್ಯವಾಗಿ ದೈಹಿಕ ಆರೋಗ್ಯಕ್ಕೆ ನೀಡುವ ಮಹತ್ವವನ್ನು ಮನಸ್ಸಿನ ಆರೋಗ್ಯಕ್ಕೆ ಕೊಡುವುದಿಲ್ಲ. ನಮಗೆ ಮಾನಸಿಕ ಸಮಸ್ಯೆ ಇರುವುದನ್ನು ಒಪ್ಪಿಕೊಳ್ಳುವುದಿಲ್ಲ. ಮನೋರೋಗದ ಹುಟ್ಟಿಗೆ ಇದು ಮೂಲ ಕಾರಣ. ಕೆಲವು ವೇಳೆ ಮಾಹಿತಿ ಕೊರತೆ ಹಾಗೂ ಮಾನಸಿಕ ರೋಗದ ಸುಳ್ಳು ವದಂತಿಗಳು ಕೂಡಾ ಈ ರೋಗಕ್ಕೆ ಕಾರಣ ಎಂಬುದು ಸತ್ಯ ಸಂಗತಿ. ಮನೋರೋಗದ ನಿವಾರಣೆಗೆ ಇರಬಹುದಾದ ಹಲವು ದಾರಿಗಳು, ಸಾಂತ್ವನ, ಆಧುನಿಕ ಚಿಕಿತ್ಸಾ ವಿಧಾನಗಳ ಮೇಲೆ ಈ ಲೇಖನ ಬೆಳಕು ಚೆಲ್ಲಿದೆ.

—ಕೆ.ಪಿ.ರಾಮಗುಂಡಿ. ಬೈಲಹೊಂಗಲ

'ಶಾಂತಿ ಭ್ರಾಂತಿ' ಲೇಖನ ಚೆನ್ನಾಗಿದೆ. ಮಾನಸಿಕ ಆರೋಗ್ಯದ ಕುರಿತು ಅತ್ಯುತ್ತಮ ಸಲಹೆ ಹಾಗೂ ಮಾಹಿತಿಗಳನ್ನು ನೀಡಲಾಗಿದೆ. ಆದರೆ ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಪ್ರಸ್ತುತ ರಾಜ್ಯದಲ್ಲಿ ಲಭ್ಯವಿರುವ ಪ್ರಸಿದ್ಧ ಮಾನಸಿಕ ಆರೋಗ್ಯ ಚಿಕಿತ್ಸಾ ಕೇಂದ್ರ/ಆಸ್ಪತ್ರೆಗಳ ವಿವರ ಹಾಗೂ ಮಾನಸಿಕ ವೈದ್ಯರುಗಳ ವಿಳಾಸ ಮತ್ತು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಗಳನ್ನು ನೀಡಿದ್ದರೆ ಚೆನ್ನಾಗಿತ್ತು.

—ಎ. ಎಚ್. ಕೃಷ್ಣಮೂರ್ತಿ, ಹಾಸನ

ನಮ್ಮ ವಿದ್ಯಾಭ್ಯಾಸ, ಪಠ್ಯಕ್ರಮದಲ್ಲಿ ಮಕ್ಕಳಿಗೆ ಮಾನಸಿಕ ಆರೋಗ್ಯದ ಬಗ್ಗೆ ಹೆಚ್ಚಿನ ಪ್ರಾಮುಖ್ಯ, ತಿಳಿವಳಿಕೆ ನೀಡಿದರೆ ಮುಂದಿನ ಪೀಳಿಗೆಯಲ್ಲಿ ಮನೋರೋಗಗಳನ್ನು ಸಾಕಷ್ಟು ಮಟ್ಟಿಗೆ ನಿಯಂತ್ರಣ ಮಾಡಬಹುದು.

—ಮಾಧವ ಉದ್ಯಾವರ, ಮೈಸೂರು

## ನೀರು ನಿಧಿ

ಅ. 17ರ ಸಂಚಿಕೆಯಲ್ಲಿ ಶ್ರೀ ಪಡ್ರೆಯವರ 'ನೀರು ನಿಧಿ' ಸರಣಿಯ 8ನೇ ಕಂತಿನಲ್ಲಿ ಪ್ರಕಟವಾದ 'ನೀರನಿಶ್ಚಿಂತೆಗೆ ಬೇಕು ನವಲಕ್ಷ ಬಾವಿ' ಲೇಖನ ಚೆನ್ನಾಗಿತ್ತು. ಅದರಲ್ಲಿ ಹೇಳಿರುವಂತೆ ಬೆಂಗಳೂರಿನ ನೀರಿನ ಹಾಹಾಕಾರಕ್ಕೆ ಇಂಗು ಬಾವಿಗಳು ಪರಿಹಾರ ಆಗಬಲ್ಲವು. ರಾಜಕಾರಣಿಗಳು ಬೆಂಗಳೂರಿಗೆ ಶರಾವತಿ, ಕಾವೇರಿಯಿಂದ ನೀರು ತರುತ್ತೇವೆ ಎಂದು ವ್ಯರ್ಥ ಆಶ್ವಾಸನೆ ನೀಡುತ್ತಾರೆ. ಅದನ್ನು ಬಿಟ್ಟು ಚೆನ್ನೈ ನಗರದಲ್ಲಿ ಮಳೆಕೊಯ್ಲು ಕಡ್ಡಾಯ ಮಾಡಿದಂತೆ ಬೆಂಗಳೂರಿನಲ್ಲಿಯೂ ಕಡ್ಡಾಯಗೊಳಿಸಿ ನೀರಿನ ಅವಶ್ಯಕತೆ ನೀಗಿಸುವುದರ ಜೊತೆಗೆ ಬೆಂಗಳೂರಿನ ಬಹುದೊಡ್ಡ ಸಮಸ್ಯೆಯಾದ ಮಳೆ ಪ್ರವಾಹವನ್ನು ತಪ್ಪಿಸಬೇಕಿದೆ. ಇಂತಹ ಸರಣಿ ಲೇಖನಗಳ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುತ್ತಿರುವ ಸುಧಾ ಪತ್ರಿಕೆಯ ಕಾರ್ಯ ಶ್ಲಾಘನೀಯ.

—ದೇಗ್ಗನಹಳ್ಳಿ ಆನಂದ್, ಕೆ. ಆರ್. ನಗರ

## ವಂಡರ್‌ಫುಲ್ ಪುಟ!

ಇತ್ತೀಚೆಗೆ ಸುಧಾ ಪತ್ರಿಕೆಯಲ್ಲಿ 'ವಂಡರ್ ಪುಟ' ತುಂಬಾ ಚೆನ್ನಾಗಿ ಮೂಡಿಬರುತ್ತಿದೆ. ಅ.17ರ ಸಂಚಿಕೆಯಲ್ಲಿ ಸುಮಾ ಬಿ. ಬರೆದಿರುವ ರೆಡ್ ಕಾರ್ಪೆಟ್ ಬೀಚ್ ಕುರಿತು ಓದಿ ನಾವು ವಂಡರ್ ಆದೆವು. ಚೀನಾ ದೇಶದವರು ಕೆಂಪು ಬಣ್ಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತಾರೆ. ಇಂಥ ಹಲವು ಸಂಗತಿಗಳನ್ನು ವಂಡರ್ ಪುಟದಲ್ಲಿ ನೋಡಬಹುದು.

—ಸುಜಾತಾ ಬಸವರಾಜ, ಬೆಂಗಳೂರು

## ನೊಬೆಲ್ ಪಡೆದ ಓಲ್ಗಾ

ಅ. 24ರ ಸಂಚಿಕೆಯಲ್ಲಿ ಸೆಲೆಬ್ರಿಟಿ ಅಂಕಣದಲ್ಲಿ 'ಹನಿ' ಬರೆದಿರುವ 'ನೊಬೆಲ್ ಪಡೆದ ಓಲ್ಗಾ' ಲೇಖನ ಮಾಹಿತಿಪೂರ್ಣವಾಗಿದೆ. ಪ್ರತಿಭಾವಂತ ಲೇಖಕಿಗೆ ಸ್ವಲ್ಪ ತಡವಾದರೂ ಬಹುದೊಡ್ಡ ಪುರಸ್ಕಾರವೇ ದಕ್ಕಿದೆ. ಇತ್ತೀಚಿನ ವರ್ಷಗಳಲ್ಲಿ ನೊಬೆಲ್ ನಂತಹ ಅತ್ಯುನ್ನತ ಪುರಸ್ಕಾರಕ್ಕೂ ವಿವಾದಗಳ ಕಳಂಕ ಅಂಟಿದ್ದು ಖೇದಕರ.

—ಸಿದ್ದಾರ್ಥ ಹೆಬ್ಬಾರ್

ಉಡುಪಿ





## ಸೃಜನಶೀಲತೆಯ ನೆಲೆ

ಅ.17 ರ ಸಂಚಿಕೆಯಲ್ಲಿ ಪ್ರಕಟವಾದ ವೀಣಾ ಜೋಷಿ ಅವರ ಲೇಖನ 'ಕಲೆ; ಸೃಜನಶೀಲತೆಯ ನೆಲೆ' ಲೇಖನ ಮಾಹಿತಿಪೂರ್ಣವಾಗಿತ್ತು. ಮಹಿಳೆಯೂ ಸಂಸಾರ ನೊಗಕ್ಕೆ ಹೆಗಲು ನೀಡಬೇಕಾಗುತ್ತದೆಂಬ ಸಂದೇಶ ಇರುವ ಈ ಲೇಖನ ಸಕಾಲಿಕವಾಗಿದೆ.

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ

## ಸುಂದರ ಕಾದಂಬರಿ

ಸುಧಾದಲ್ಲಿ ಪ್ರಕಟವಾಗುತ್ತಿರುವ ದಿನಕರ ಜೋಷಿ ಬರೆದ, ಡಿ.ಎನ್. ಶ್ರೀನಾಥ್ ಕನ್ನಡಕ್ಕೆ ಅನುವಾದಿಸಿದ 'ಬೆಳಕಿನ ನೆರಳು'— ಧಾರಾವಾಹಿ ಚೆನ್ನಾಗಿ ಮೂಡಿಬರುತ್ತಿದೆ. ಗಾಂಧೀಜಿಯವರ 150ನೇ ವರ್ಷಾಚರಣೆ ಸಂದರ್ಭದಲ್ಲಿ 'ಸುಧಾ' ಮೂಲಕ ಎಲ್ಲರಿಗೂ ಈ ಕಾದಂಬರಿ ಪ್ರಸ್ತುತಪಡಿಸುತ್ತಿರುವುದು ಅಭಿನಂದನೀಯ.

—ಸು. ವಿಜಯಲಕ್ಷ್ಮಿ ಶಿವಮೊಗ್ಗ

## ಅರ್ಥಪೂರ್ಣ ಕಥೆ

ಅ. 17ರ ಸಂಚಿಕೆಯಲ್ಲಿ ಪ್ರಕಟವಾದ ನಟರಾಜ್ ಹುಳಿಯಾರ್ ಅವರ ಕಥೆ 'ಒಂದು ಬಹುಮಾನದ ಸುತ್ತ' ಧ್ವನಿಪೂರ್ಣವಾಗಿದೆ. ಸ್ಪರ್ಧೆ, ಬಹುಮಾನ, ಅದನ್ನು ಪಡೆಯುವ ಲೇಖಕನ ಒಳಗಿನ ಹುಸಿತನ, ಹೇಡಿತನಗಳ ಸುತ್ತ ಸುತ್ತುವ ಕಥೆ, ಕಥೆ ಮತ್ತು ಕಥೆಗಾರನ ಸಂಬಂಧವನ್ನು, ಆ ಮೂಲಕ ಮನುಷ್ಯ ಮತ್ತು ಸಾಹಿತ್ಯದ ಸಂಬಂಧವನ್ನು ತುಂಬ ಸಂಕೀರ್ಣವಾಗಿ ಕಟ್ಟಿಕೊಡುತ್ತದೆ. ಇದು ಓದುಗರಿಗಾಗಿ ಕಥೆಯಲ್ಲ, ಕಥೆಗಾರರಿಗೆ, ಸ್ಪರ್ಧೆಗಳಲ್ಲಿ ಗೆದ್ದು ಬೀಗುವುದನ್ನೇ ಹಿರಿಮೆ ಎಂದುಕೊಂಡಿರುವ ಬರಹಗಾರರಿಗಾಗಿಯೇ ಬರೆದಿರುವ ಕಥೆ ಎನಿಸಿತು. ಎಲ್ಲ ಬರಹಗಾರರು ಇದನ್ನು ಆತ್ಮವಿಮರ್ಶೆಯ ಪಠ್ಯದಂತೆ ಓದಿಕೊಳ್ಳಬೇಕು.



—ಆಯೇಷಾ, ಯಲ್ಲಾಪುರ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in